<u>ಅಸಲು ದಾವಾ ಸಂಖ್ಯೆಃ **-181/2014**</u> ಡಿ.ಡಬ್ಲ್ಯೂ.**:-2**

ದಿನಾಂಕಃ **14-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ವಾದಿಯು ಸಲ್ಲಿಸಿರುವ ದಾವೆಯ ವಿಚಾರ ನನಗೆ ಗೊತ್ತು. ವಾದಿಯು ವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗ ಗೊತ್ತು. 2 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗ ಗೊತ್ತು. 2 ನೇ ಪ್ರತಿವಾದಿಯು ತಮ್ಮ ತಂದೆಗೆ ಸೇರಿದ ಜಮೀನು ತಮಗೆ ಸೇರಿದ್ದು ಎಂದು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ. 2 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಜಮೀನು ಇರುವುದಿಲ್ಲ ಅವರ ಅಣ್ಣ ತಮ್ಮಂದಿರ ಹೆಸರಿಗೆ ಜಮೀನು ಇರುತ್ತದೆ. ವೀರೇಶಪ್ಪನ ತಂದೆಯ ಹೆಸರು ರುದ್ರಪ್ಪ. ರುದ್ರಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯ ವಾರಸುದಾರರ ಹೆಸರು ಪಹಣಿಯಲ್ಲಿ ನಮೂದಾಗಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಶಾಂತಮ್ಮರವರು ಮೃತ ಆಗಿದ್ದಾರೆ ಎಂದು ನಿಂಗರಾಜಪ್ಪರವರ ಮೃತ ಪ್ರಮಾಣ ಪತ್ರವನ್ನು ನೀಡಿ ದಾವಾ ಆಸ್ತಿಯ ಖಾತೆಯನ್ನು ಮಾಡಿಕೊಂಡಿರುವುದು ಸುಳ್ಳಿನಿಂದ ಕೂಡಿದೆ ಎಂದು ನಮೂದು ಮಾಡಿದ್ದು ಸದರಿ ವಿಚಾರವನ್ನು ಯಾವ ದಾಖಲೆಗಳ ಆಧಾರದ ಮೇಲೆ ನಮೂದು ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ತಾಯಿಯಾದ ಶಾಂತಮ್ಮ ಮತ್ತು ನೀಲಪ್ಪರವರ ಮರಣ ಪ್ರಮಾಣ ಪತ್ರವನ್ನು ನಾನು ನೋಡಿರುವುದಿಲ್ಲ. ಶಾಂತಮ್ಮ ಮತ್ತು ನೀಲಪ್ಪರವರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಜಮೀನಿನ ಸ್ವಲ್ಪ ಭಾಗ ನೀರಾವರಿಗೆ ಸರ್ಕಾರಕ್ಕೆ ಹೋಗಿರುತ್ತದೆ ಎಂದು ನಮೂದು ಮಾಡಿದ್ದು ಸಾಕ್ಷಿಗೆ

ಣಾಗ ಎಂದರೆ ಏನು ಎಂಬ ಪ್ರಶ್ನೆಗೆ ಸಾಕ್ಷಿಯು ನಾಲಾ ಬದಲಾಗಿ ಣಾಗ ಎಂದು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**